ಇ) ಈ ಕೆಲಸವನ್ನು ಪ್ರಾರಂಭಿಸಲು ಜಿಲ್ಲಾ ರಂಗಮಂದಿರ ಸಮಿತಿಗೆ ತಿಳಿಸಲಾಗಿದೆ.

ಶ್ರೀ ಎಂ.ಎಸ್. ಆತ್ಮಾನಂದ : ಮಾನ್ಯ ಅಧ್ಯಕ್ಷರೆ, ಉತ್ತರದಲ್ಲಿ ಮಾನ್ಯ ಸಚಿವರು ಕೆಲಸ ಪ್ರಾರಂಭ ಮಾಡಲು ಜಿಲ್ಲಾ ರಂಗಮಂದಿರ ಸಮಿತಿಗೆ ತಿಳಿಸಲಾಗಿದೆ ಎಂದು ಹೇಳಿದ್ದಾರೆ. ಹಾಗಾದರೆ ಈ ಕಾರ್ಯವನ್ನು ಯಾವಾಗ ಪ್ರಾರಂಭ ಮಾಡುತ್ತಾರೆ? ಅಲ್ಲಿ ಬಹಳ ಕಾಲದಿಂದ ಸ್ಥಗಿತವಾಗಿರತಕ್ಕಂಥ ಇದರ ನಿರ್ಮಾಣ ಕಾರ್ಯವನ್ನು ವಿಶೇಷ ಕಾಳಜಿ ವಹಿಸಿ ಮಾನ್ಯ ಮುಖ್ಯಮಂತ್ರಿಯವರು ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರು ಪ್ರಾರಂಭ ಮಾಡಿದ್ದಾರೆ. ಮುಖ್ಯಮಂತ್ರಿಯವರು ಆಶ್ವಾಸನೆ ಕೊಟ್ಟಿರುವ ರೀತಿಯಲ್ಲಿ 1994-95ನೇ ಸಾಲಿನಲ್ಲಿ ಈ ಕೆಲಸಕ್ಕೆ ಹೆಚ್ಚಿನ ಅನುದಾನವನ್ನು ಕೊಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಹೆಚ್. ವಿಶ್ವನಾಥ್ : ಮಾನ್ಯ ಅಧ್ಯಕ್ಷರೇ, ಮಂಡ್ಯ ರಂಗಮಂದಿರದ ಪರವಾಗಿ ಮಾನ್ಯ ಮುಖ್ಯಮಂತ್ರಿಯವರು ಕೊಟ್ಟ ಆಶ್ವಾಸನೆಯ ಪ್ರಕಾರ ಈಗಾಗಲೇ 10 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. ಸುಮಾರು 50 ಲಕ್ಷ ರೂಪಾಯಿಗಳಿಗೆ ಆಡಳಿತ ಮಂಜೂರಾತಿಯನ್ನು ಕೂಡ ಕೊಟ್ಟು ಅಲ್ಲಿಯ ಸಾರ್ವಜನಿಕರು ಮತ್ತು ಶಾಸಕರುಗಳ ಸಹಕಾರವನ್ನು ತೆಗೆದುಕೊಂಡು ಆದಷ್ಟು ಶೀಘ್ರವಾಗಿ ನಾವು ಅದನ್ನು ಪೂರ್ಣ ಮಾಡುತ್ತೇವೆ ಎಂಬ ಆಶ್ವಾಸನೆಯನ್ನು ನಾನು ಕೊಡುತ್ತೇನೆ.

ಯೋಜನಾ ಆಯೋಗದವರು ನಮ್ಮ ರಾಜ್ಯಕ್ಕೆ 1994 -95ನೇ ಸಾಲಿಗೆ ನಿಗದಿ ಪಡಿಸಿರುವ ಹಣದ ಮೊತ್ತ

96 - ಶ್ರೀ ಎಂ. ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಯೋಜನಾ, ಸಾಂಖ್ಯಿಕ ಹಣಕಾಸು ಮತ್ತು ಸಾಂಖ್ಯಿಕ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1994 - 95ನೇ ಸಾಲಿನಲ್ಲಿ ಯೋಜನಾ ಆಯೋಗದವರು ನಮ್ಮ ರಾಜ್ಯಕ್ಕೆ ನಿಗದಿಪಡಿಸಿರುವ ಯೋಜನಾ ಹಣದ ಮೊತ್ತವೆಷ್ಟು?

ಆ) ಯಾವ ಯಾವ ವಿಭಾಗಗಳಿಗೆ ಎಷ್ಟೆಷ್ಟು ಹಣ ನಿಗದಿಪಡಿಸಲಾಗಿದೆ?

ಇ) ರಾಜ್ಯ ಸರ್ಕಾರದವರು ಕ್ರೋಢೀಕರಿಸಬೇಕೆಂದಿರುವ ಹಣದ ಮೊತ್ತವೆಷ್ಟು?

ಈ) ಕಾವೇರಿ ಮತ್ತು ಕೃಷ್ಣಾ ನದಿಗಳ ನೀರನ್ನು ಸಕಾಲದಲ್ಲಿ ಉಪಯೋಗಿಸಲು ಮೇಲ್ಕಂಡ ಯೋಜನೆಯಲ್ಲಿ ನಿಗದಿಪಡಿಸಿರುವ ಹಣದ ಮೊತ್ತವೆಷ್ಟು?

ಶ್ರೀ ಟಿ.ಎಂ. ಮಂಜುನಾಥ್ (ಯೋಜನಾ, ಸಾಂಖ್ಯಿಕ ಹಣಕಾಸು ಮತ್ತು ಸಾಂಖ್ಯಿಕ ರಾಜ್ಯ ಮಂತ್ರಿಗಳು) :

ಅ) 3275.00 ಕೋಟಿ ರೂಪಾಯಿಗಳು.

ಆ) ವಲಯವಾರು ಮೊತ್ತದ ಹಂಚಿಕೆಯನ್ನು ಅಂತಿಮಗೊಳಿಸಲಾಗುತ್ತಿದೆ.

ಇ) ರಾಜ್ಯದ ಸಂಪನ್ಮೂಲ: 2094.95 ಕೋಟಿ ರೂಪಾಯಿಗಳು

ಕೇಂದ್ರದ ನೆರವು : 1180.05 ಕೋಟಿ ರೂಪಾಯಿಗಳು

ಈ) ಕೃಷ್ಣಾ ಮೇಲ್ದಂಡೆ ಯೋಜನೆಯ ಮೊತ್ತವು ಯೋಜನೆಯಲ್ಲಿಯೂ ಮತ್ತು ಕಾವೇರಿ ಯೋಜನೆಯ ಮೊತ್ತವು ಯೋಜನೇತರ ಆಯವ್ಯಯದಲ್ಲಿಯೂ ರೂಪುಗೊಳ್ಳುವುವು. ಇದನ್ನು 1994-95ನೇ ಸಾಲಿಗೆ ಆಯವ್ಯಯ ಅಂದಾಜನ್ನು ರೂಪಿಸುವಾಗ ಪರಿಗಣಿಸಲಾಗುವುದು.

ಶ್ರೀ ಎಂ. ವಿ. ವೆಂಕಟಪ್ಪ : ಮಾನ್ಯ ಅಧ್ಯಕ್ಷರೇ ತಾವು ಯೋಜನಾ ಆಯೋಗಕ್ಕೆ ಹೋದಾಗ 3275 ಕೋಟಿ ರೂಪಾಯಿ ಬೇಡಿಕೆಯನ್ನು ಸಬ್ಮಿಟ್ ಮಾಡಿದ್ದೀರಾ? ಅಥವಾ ನೀವು ಹೆಚ್ಚು ಮಾಡಿ, ಅವರು ಕಡಿಮೆ ಮಾಡಿದ್ದಾರೆಯೇ?

ಶ್ರೀ ಟಿ.ಎಂ. ಮಂಜುನಾಥ್ : ಮಾನ್ಯ ಅಧ್ಯಕ್ಷರೆ, ನಾವು 3220 ಕೋಟಿ ರೂಪಾಯಿಗಳಿಗೆ ಎಂದು ಕೊಟ್ಟಿದ್ದೆವು. ಮಾನ್ಯ ಮುಖ್ಯಮಂತ್ರಿಯವರು ಅದರ ಕೂಲಂಕುಷ ಪರಿಶೀಲನೆ ಮಾಡಿ ಯೋಜನಾ ಇಲಾಖೆಯ ಉಪಾಧ್ಯಕ್ಷರು ಏನಿದ್ದಾರೆ ಅವರು ಇನ್ನೂ ಹೆಚ್ಚಿಗೆ ಕೊಡುತ್ತೇವೆ ಎಂದು ಹೇಳಿ, 3275 ಕೋಟಿಗಳಿಗೆ ನಮ್ಮ 1994-95ನೇ ಸಾಲಿನ ಯೋಜನೆ ವೆಚ್ಚವನ್ನು ನಿಗದಿ ಮಾಡಿದ್ದಾರೆ.

ಶ್ರೀ ಎಂ.ವಿ. ವೆಂಕಟಪ್ಪ : ಇದರಲ್ಲಿ ಮೈದಾನ ಏರಿಯ ಡೆವಲಪ್ಮೆಂಟ್ ಬೋರ್ಡ್ ಎಂದು ಮಾನ್ಯ ಮುಖ್ಯಮಂತ್ರಿಗಳು ಮತ್ತು ತಾವು ಸೇರಿ ಹೇಳಿದ್ದೀರಿ. ಇದರ ಬಗ್ಗೆ ತಾವುಗಳು ಏನಾದರೂ ಆಲೋಚನೆ ಮಾಡಿ ನಾಳೆ ಬಜೆಟ್ನಲ್ಲಾದರೂ ಒಂದಿಷ್ಟು ಹಣವನ್ನು ಇಡುವುದಕ್ಕೆ ಏರ್ಪಾಡು ಮಾಡುತ್ತೀರಾ?

ಶ್ರೀ ಟಿ.ಎಂ. ಮಂಜುನಾಥ್ : ಮುಖ್ಯಮಂತ್ರಿಯವರು ಈಗಾಗಲೇ ಆ ಬಗ್ಗೆ ಭರವಸೆಯನ್ನು ಕೊಟ್ಟಿದ್ದಾರೆ. ಆದ್ಯತೆಯನ್ನೂ ಕೊಟ್ಟಿದ್ದಾರೆ. ಈ ಬೋರ್ಡನ್ನು ಮಾಡುವುದಕ್ಕೋಸ್ಕರ ಮುಂದಿನ ಆಯವ್ಯಯದಲ್ಲಿ ಹಣವನ್ನು ಇಡಲು ಪ್ರಯತ್ನ ಮಾಡುತ್ತೇವೆ.

ಶ್ರೀ ಸಿ. ಬೈರೇಗೌಡ : ಒಂದು ಶಾಸನಬದ್ಧವಾದಂಥ ಸ್ವರೂಪವನ್ನು ಅದಕ್ಕೆ ಕೊಡುತ್ತೇವೆ ಎಂದು ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದಾರೆ. ಹೋದ ಸಾರಿ ನಾವು ಭೇಟಿಯಾದಾಗ ಅದರ ಬಿಲ್ಲನ್ನು ತರುತ್ತಾ ಇದ್ದೇವೆ, ಎಲ್ಲಾ ತಯಾರಿದೆ ಎಂಬ ಮಾತನ್ನು ಹೇಳಿದ್ದರು. ಅದು ಈಗ ಯಾವ ಹಂತದಲ್ಲಿ ಇದೆ? ಅಥವಾ ಹೀಗೆ ಹೇಳುತ್ತಾ ಕಾಲವನ್ನು ಕಳೆಯುತ್ತಾರೋ? ಅಥವಾ ಅದನ್ನು ಕಾರ್ಯರೂಪದಲ್ಲಿ ತರತಕ್ಕಂಥಾದ್ದಕ್ಕೆ ಏನಾದರೂ ಕ್ರಮವನ್ನು ತೆಗೆದುಕೊಳ್ಳುತ್ತಾರೋ ಎಂಬ ಬಗ್ಗೆ ಹೇಳಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಟಿ.ಎಂ. ಮಂಜುನಾಥ್ : ಮಾನ್ಯ ಮುಖ್ಯಮಂತ್ರಿಯವರು ತಮ್ಮೆಲ್ಲರನ್ನೂ ಕರೆಸಿ ಮೈದಾನ ಏರಿಯಾಕ್ಕೆ ಸಂಬಂಧಪಟ್ಟಂಥ ವಿಧಾನ ಸಭೆ, ವಿಧಾನ ಪರಿಷತ್ತು ಮತ್ತು ಪಾರ್ಲಿಮೆಂಟ್ನ ಎಲ್ಲಾ ಸದಸ್ಯರುಗಳನ್ನು ಕರೆಸಿ, ತಮ್ಮ ಎಲ್ಲಾ ಅನಿಸಿಕೆಗಳನ್ನು ತಿಳಿದುಕೊಂಡು ಇದನ್ನು ಕೂಡಲೇ ಜಾರಿಗೆ ತರಬೇಕೆನ್ನುವ ಕಾತುರತೆಯು ನಿಮಗಿಂತಲೂ ಹೆಚ್ಚಿಗೆ ಮಾನ್ಯ ಮುಖ್ಯಮಂತ್ರಿಯವರಿಗೆ ಇದೆ. ಅದನ್ನು ತರುತ್ತೇವೆ ಎಂಬ ಉದ್ದೇಶದಿಂದಲೇ ಆ ಮಾತನ್ನು ತಮಗೆ ಹೇಳಿರತಕ್ಕಂಥಾದ್ದು. ಈ ಆಯವ್ಯಯದಲ್ಲಿಯೇ ಅದನ್ನು ತಂದೇ ತರುತ್ತೇವೆ.

ಸಿ.ಒ.ಡಿ.ಗೆ ವಹಿಸಿರುವ ಪ್ರಕರಣಗಳ ಕುರಿತು

15 - ಶ್ರೀ ಗುರುಪಾದಪ್ಪ ನಾಗಮಾರಪಲಳ್ಳಿ (ಔರಾದ್) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 4 ವರ್ಷಗಳಲ್ಲಿ ರಾಜ್ಯ ಪತ್ತೆದಾರಿ ದಳ (ಸಿ.ಒ.ಡಿ) ಕ್ಕೆ ಯಾವ ಯಾವ ಪ್ರಕರಣಗಳನ್ನು ತನಿಖೆ ನಡೆಸುವ ಸಲುವಾಗಿ ನೀಡಲಾಗಿದೆ.

ಆ) ಅವುಗಳಲ್ಲಿ ಇದುವರೆವಿಗೆ ಎಷ್ಟು ಪ್ರಕರಣಗಳಿಗೆ 'ಬಿ' ವರದಿಗಳನ್ನು ಸಲ್ಲಿಸಲಾಗಿದೆ. ಹಾಗೂ ಅಂತಹ ಪ್ರಕರಣಗಳ ವಿವರಗಳೇನು

ಇ) ಮೇಲ್ಕಂಡ ಅವಧಿಯಲ್ಲಿ ನೀಡಲಾದ ಎಷ್ಟು ಪ್ರಕರಣಗಳಿಗೆ ನ್ಯಾಯಾಲಯಗಳಿಂದ ಸಿ.ಒ.ಡಿ.ಗೆ ಪರವಾದ ತೀರ್ಪು ಬಂದಿದೆ ಹಾಗೂ ಎಷ್ಟಕ್ಕೆ ಸಿ.ಒ.ಡಿ.ಗೆ ವಿರುದ್ಧವಾದ ತೀರ್ಪುಗಳು ಬಂದಿವೆ?
(ಈ ಪ್ರಕರಣಗಳ ವಿವರಗಳನ್ನು ಒದಗಿಸುವುದು)

ಈ) ಸಿ.ಒ.ಡಿ.ಗೆ ವಿರುದ್ಧವಾಗಿ ಬಂದಿರುವ ಯಾವ ಯಾವ ಪ್ರಕರಣಗಳ ತೀರ್ಪುಗಳ ಮೇಲೆ ಮೇಲ್ಮನವಿಯನ್ನು ಸಲ್ಲಿಸಲಾಗಿದೆ?